**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಟಿ.ನರಸೀಪುರ**

**ಸಿ.ಸಿ ಸಂಖ್ಯೆ: 388/2024**

**ಫಿರ್ಯಾದಿದಾರರು** : ಜಯಶಂಕರ.ಎಸ್

**ವಿರುದ್ಧ**

**ಆರೋಪಿ** : ಸದಾಶಿವ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

**ಉಃ**

ಪ್ರಶ್ನೆ:2: ಫ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿಮ್ಮ ಕುಟುಂಬದ ಅವಶ್ಯಕತೆಗಾಗಿ, ಪಿರ್ಯಾದುದಾರರಿಂದ ದಿಃ 02/05/2023 ರಂದು ರೂ.2,78,000/- ಗಳನ್ನು ಸಾಲವಾಗಿ ಪಡೆದಿದ್ದು, ಹಾಗೂ ಕೆನರಾ ಬ್ಯಾಂಕ್, ಟಿ.ನರಸೀಪುರ ಶಾಖೆ, ಚೆಕ್ ಸಂಖ್ಯೆ 482301 ಚೆಕ್ ಅನ್ನು ರೂ.2,78,000/- ಗಳಿಗೆ ದಿಃ 01/07/2023 ಗಳನ್ನು ನಮೂದಿಸಿ ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

ಪ್ರ:**3**: ಫ್ರಾಸಾ-**1** ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಅವರು ಸದರಿ ಚೆಕ್ಕನ್ನು ಕೆನರಾ ಬ್ಯಾಂಕ್**,** ಟಿ.ನರಸೀಪುರ ಶಾಖೆಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು ಖಾತೆಯಲ್ಲಿ **"Funds Insufficient"** ಎಂದು ದಿಃ 15/07/2023 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆ:4**: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿಃ **11/08/2023** ರಂದು ನಿನಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ, ನೀನು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

**ಉಃ**

**ಪ್ರಶ್ನೆಃ 5** : ನೀವು ಈ ಪ್ರಕರಣದಲ್ಲಿ ಏನಾದರೂ ಹೇಳುವುದಿದೆಯೇ ?

**ಉಃ**

**ಪ್ರಶ್ನೆಃ 6** : ನೀವು ನಿಮ್ಮ ಪರವಾದ ಯಾವುದಾದರೂ ಸಾಕ್ಷ್ಯವನ್ನು ಮತ್ತು ದಾಖಲೆಗಳನ್ನು ಹಾಜರುಪಡಿಸುತ್ತೀರಾ?

**ಉತ್ತರಃ**

ನನ್ನ ಸಮಕ್ಷಮದಲ್ಲಿ ಆರೋಪಿತನ ವಿಚಾರಣೆಯನ್ನು ನಡೆಸಿದ್ದು, ಆರೋಪಿತನು ನೀಡಿದ ಉತ್ತರವನ್ನು ಯಥಾವತ್ತಾಗಿ ಮತ್ತು ಸಂಪೂರ್ಣವಾಗಿ ದಾಖಲು ಮಾಡಿಕೊಂಡಿದ್ದೇನೆಂದು ಈ ಮೂಲಕ ದೃಢಪಡಿಸುತ್ತೇನೆ.

ದಿನಾಂಕಃ 09/03/2026 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರದನ್ಯಾದಂ., ಟಿ.ನರಸೀಪುರ.**